# ನವಿಲುಗನ್ನಡಿ

- ಬುಕರ್ ಬಾನು ಸಂಭ್ರಮದ ಸಂದರ್ಭದಲ್ಲಿ ಮಯೂರ ಹೊತ್ತು ತಂದ ಜುಲೈ ಸಂಚಿಕೆಯಲ್ಲಿ ಬಾನು ಅವರ ಅಪ್ರಕಟಿತ ಆತ್ಮಕಥೆಯ ಭಾಗ, ಭಾರತಿದೇವಿ ಪಿ., ಎಂ.ಎಸ್. ಆಶಾದೇವಿ, ಅವರ ಲೇಖನ, ದೀಪಾ ಭಾಸ್ತಿ ಸಂದರ್ಶನವು ಓದುಗರ ಮನದಲ್ಲಿ ಆನಂದ ಅಷ್ಟೇ ಅಲ್ಲ, ಭಾಷೆಯ ಅಸ್ಮಿತೆ, ನಾಡಿನ ಬಗ್ಗೆ ಹೆಮ್ಮೆ, ಲೇಖಕಿಯರ ಹಿರಿದಾದ ಸಾಧನೆಯ ಪುಳಕ ಮೂಡಿಸಿತು.ಈ ವಿಶೇಷ ಸಂಚಿಕೆಗಾಗಿ ಮಯೂರ ಹಾಗೂ ಲೇಖಕರಿಗೆ ಧನ್ಯವಾದಗಳು

**ಅಕ್ಬರ್ ಸಿ. ಕಾಲಿಮಿರ್ಚಿ, ಕೊಪ್ಪಳ**

- ಬಾನು ಮುಷ್ತಾಕ್ ಆತ್ಮಕಥೆಯ ಭಾಗ, ಅನುವಾದಕ್ಕೆ ಸಿಕ್ಕ ಗೌರವ ಕನ್ನಡ ಕಥಾ ಜಗತ್ತಿನ ಬೇರೆಲೋಕವನ್ನೇ ತಿಳಿಸಿತು. ಎಲ್ಲ ಕಥೆಗಳು ವಿಭಿನ್ನವಾಗಿದ್ದವು. ಸದಾಶಿವ ಸೊರಟೂರು ಅವರ 'ಗೆರೆಗಳು' ಆಧುನಿಕ ವ್ಯವಸ್ಥೆ ಬದುಕನ್ನೇ ನುಂಗುವ ಕಥೆ ವಿಶಿಷ್ಟವಾದುದು. 'ದಹನ' ಮತ್ತು 'ಒಂದು ಮುಟ್ಟಿನ ಕಥೆ' ಚಿಂತನಾರ್ಹವಾಗಿವೆ.

**ಮಾರುತಿ ಗೋಪಿಕುಂಟೆ**

- 'ನಂದಾದೀಪ' ಅಂಕಣದಲ್ಲಿ ಅಗಲಿದ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರ ಕುರಿತು ಜ.ನಾ. ತೇಜಶ್ರೀ ಬರೆದ 'ಕವಿಜೀವದ ಗಂಧವ್ರತ' ಲೇಖನ ಮತ್ತು ಮಯೂರ ವಿಶೇಷದಲ್ಲಿ ಬಾನು ಮುಷ್ತಾಕ್ ಅವರ ಅಪ್ರಕಟಿತ ಆತ್ಮಕಥೆಯ ಬರಹ ಚೇತೋಹಾರಿಯಾಗಿತ್ತು.

**ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್. ಪೇಟೆ, ಮಂಡ್ಯ**

- ಶಶಿಕುಮಾರ್ ಅವರ ಪಾಬ್ಲೊ ನೆರೂಡ ಕುರಿತ ಲೇಖನದಲ್ಲಿ ಪ್ರಸ್ತಾಪಿಸಿರುವಂತೆ ನಾಟಕಕಾರ ಬ್ರೆಕ್ಟ್ ಬಗ್ಗೆಯೂ ಅದೇ ತರಹದ ಮಾತುಗಳಿವೆ. ಮತ್ತೆ ಸೋವಿಯತ್ ರಷ್ಯಾದ ಕಮ್ಯುನಿಸ್ಟ್ ವ್ಯವಸ್ಥೆ ಬಗ್ಗೆ ತೀವ್ರ ವಿರೋಧದ ದನಿ ಎತ್ತಿದ ಮೊದಲಿಗರಲ್ಲಿ ಒಬ್ಬನಾದ ಲೇಖಕ ಜಾರ್ಜ್ ಆರ್ವೆಲ್ ಬಗ್ಗೆ ಕೂಡ ಅದೇ ತರಹದ ಮಾತುಗಳಿವೆ. ನೆರೂಡನನ್ನು ಇಲ್ಲಿ ಸಮರ್ಥಿಸುತ್ತಿಲ್ಲ. ಆದರೆ, ತನ್ನ ಲೈಂಗಿಕ ಸಾಹಸ ಕುರಿತು ಹೇಳಿಕೊಂಡಿರುವ ಜತೆಗೆ ತನ್ನ ಪತ್ನಿಯ ಈ ಮೊದಲಿನ ಮತ್ತು ನಂತರದ




ಪ್ರೇಮಿಗಳ ಕುರಿತು ಮಾತನಾಡಿದ್ದು ಇಲ್ಲ ಎಂದೂ ಹೇಳಿಕೊಂಡಿದ್ದಾನೆ. ಅಂದರೆ ಅಷ್ಟಾದರೂ ಸಂವೇದನಾಶೀಲತೆ ಅವನಿಗೆ ಇತ್ತು. ಆದರೆ, ಆರ್ವೆಲ್ ತನ್ನ ಪತ್ನಿ ಜತೆ ಕೆಟ್ಟದಾಗಿ ನಡೆದುಕೊಂಡ ಎಷ್ಟೋ ಸಂಗತಿಗಳನ್ನು ಕುರಿತು ತೀರಾ ಇತ್ತೀಚೆಗೆ ಬಂದ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ. ಶ್ರೀಮಂತ ಹಿನ್ನೆಲೆಯ ಆರ್ವೆಲ್‌ನ ಹೆಂಡತಿ ಸ್ತ್ರೀವಾದಿ. ಆದರೂ ಆಕೆ ಸಹಿಸಿಕೊಂಡಿದ್ದಳು! ಎಂದರೆ ಆ ರೀತಿ ಬರೆಯುತ್ತಾ ಹೋದರೆ ಬಹುತೇಕ ಲೇಖಕರು ಕಟಕಟೆಯಲ್ಲಿ ನಿಲ್ಲಬೇಕಾಗುತ್ತದೆಯೋ ಏನೋ?!

**ಪ್ರೊ. ಸುಚೇತನ ಸ್ವರೂಪ**

- 'ಹೊಲಸು' ಸಣ್ಣಕಥೆಯನ್ನು ಕಥೆಗಾರ್ತಿ (ಡಾ. ಸೌಮ್ಯ ಕೆ.ವಿ.) ತುಂಬಾ ಮಾರ್ಮಿಕವಾಗಿ ಹೆಣೆದಿದ್ದಾರೆ. ಕಥಾನಾಯಕಿ ಮತ್ತು ನಾಯಕ, ಕಥಾವಸ್ತು, ಬೆಳೆದು ಬಂದ ಹಾದಿ ಸೊಗಸಾಗಿ ಮೂಡಿಬಂದಿದೆ, ಸಂದರ್ಭಗಳು ಹೇಗೆ ಉಸಿರು ಕಟ್ಟಿಸುತ್ತವೆ ಎಂದು ವಿಭಿನ್ನವಾಗಿ ಕಥೆಗಾರ್ತಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ.

**ಸು.ರಾ. ನರಸಿಂಹ ಪ್ರಸಾದ್, ಕುಣಿಗಲ್**